ಸಂಪುಟ : 40 ಸಂಚಿಕೆ 139 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 15 ಜೂನ್ 2017 ಗುರುವಾರ POST REG NO . L-2/RNP- 364/TMR/2015-17 ಪುಟಗಳು :10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



**ವಿವಿ ಕಾಯ್ದೆಗೆ ತಿದ್ದುಪಡಿ: ಉಪಕುಲಪತಿಗಳೂ ಬೋಧನೆ ಮಾಡುವುದು ಕಡ್ಡಾಯ– ಸಚಿವ ರಾಯರೆಡ್ಡಿ**

ವಿವರ : ಪುಟ 10




**ರಾಷ್ಟ್ರಪತಿ ಸ್ಥಾನಕ್ಕೆ ಜು.17ರಂದು ಚುನಾವಣೆ: ಆಯೋಗದಿಂದ ಅಧಿಸೂಚನೆ ಪ್ರಕಟ**

ವಿವರ : ಪುಟ 6

**ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಇಂದು ಮಧ್ಯಾಹ್ನ 3ಕ್ಕೆ ಭಾರತ–ಬಾಂಗ್ಲಾ ನಡುವೆ ಪಂದ್ಯ**



₹55 Discount Per Gram
Gold 916 ₹ 2730/-
Silver ₹ 40200/-
ಸೂರ ಜ್ಯುಯಲರ್ಸ್
Ashoka Road, Tumkur
Ph: 0816 4022274

# ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತಕ್ಕೆ ಭವಿಷ್ಯವಿದೆ

## ಎಸ್‌ಐಟಿಯಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಡಾ|| ಶಿವತನು ಪಿಳ್ಳೈ ಅಭಿಮತ

**ತುಮಕೂರು**

ಭಾರತೀಯ ಬಾಹ್ಯಾಕಾಶ ಸಂಸ್ಥೆಯ ಉಗಮಕ್ಕೆ ಕಾರಣರಾದ ಡಾ.ವಿಕ್ರಂ ಸಾರಾಭಾಯಿಯವರ ದೂರದರ್ಶಿತ್ವದ ಫಲವಾಗಿ ಇಂದು ನಮ್ಮ ಭಾರತ ದೇಶವು ಬಾಹ್ಯಾಕಾಶ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿದೆ ಎಂದು ಪದ್ಮಭೂಷಣ ಪುರಸ್ಕೃತ, ರಕ್ಷಣಾ ಸಂಶೋಧನಾ ಸಂಸ್ಥೆಯ ಡಾ.ಶಿವತನು ಪಿಳ್ಳೆ ಅಭಿಪ್ರಾಯಪಟ್ಟಿದ್ದಾರೆ.

ಅವರು ಸಿದ್ದಗಂಗಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಏರ್ಪಡಿಸಲಾಗಿದ್ದ ಉದ್ಯೋಗ ಮೇಳ ಮತ್ತು ಕಾರ್ಯಾಗಾರದಲ್ಲಿ ಮಾತನಾಡಿದರು. ತುಮಕೂರಿನ ಎಸ್‌ಐಟಿ ಕಾಲೇಜು ತಾಂತ್ರಿಕ ಶಿಕ್ಷಣ ನೀಡುವ ಉತ್ಕೃಷ್ಟ ಸಂಸ್ಥೆಯಾಗಿದ್ದು ಉತ್ತಮವಾದ ಪ್ರತಿಭೆಗಳನ್ನು ಹೊರತರುತ್ತಿದೆ. ಯುವಜನತೆಯಲ್ಲಿರುವ ಪ್ರತಿಭೆಯನ್ನು ಹೊರತರುವುದೇ ಒಂದು

> **ಯುವಜನತೆಯಲ್ಲಿರುವ ಪ್ರತಿಭೆಯನ್ನು ಹೊರತರುವುದೇ ಒಂದು ದೊಡ್ಡ ಸವಾಲು. ಕೇವಲ ಕೆಲವೇ ವರ್ಷಗಳ ಹಿಂದೆ ಯಾವುದೇ ರೀತಿಯಲ್ಲಿಯೂ ಪಾಶ್ಚಿಮಾತ್ಯ ರಾಷ್ಟ್ರಗಳ ಜೊತೆ ಮಾತನಾಡುವ ಅಥವಾ ಸಂಪರ್ಕ ಸಾಧಿಸುವ ಸ್ಥಿತಿಯಲ್ಲಿ ಭಾರತ ದೇಶ ಇರಲಿಲ್ಲ. ಆದರೆ ಇಂದು ಆರ್ಥಿಕಾಭಿವೃದ್ಧಿಯ ದೃಷ್ಟಿಯಲ್ಲಿ ಜಾಗತಿಕ ವಾಗಿ ಮೂರನೇ ಸ್ಥಾನದಲ್ಲಿದೆ ಎಂದರೆ ಇದರ ಹಿಂದಿನ ಪರಿಶ್ರಮ ಮತ್ತು ಭಾರತೀಯ ಪ್ರತಿಭೆಗಳ ಬದ್ಧತೆಯೇ ಕಾರಣ ಎನ್ನಬಹುದು.**
>
> **– ಡಾ.ಶಿವತನು ಪಿಳ್ಳೈ**




ಎಸ್‌ಐಟಿಯಲ್ಲಿ ನಡೆದ ಉದ್ಯೋಗ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಡಾ|| ಶಿವತನುಪಿಳ್ಳೈ, ಮುರುಳೀಧರ ಹಾಲಪ್ಪ, ಡಾ|| ಎಂ.ಎಸ್. ಚನ್ನಬಸಪ್ಪ, ಡಾ|| ಶಿವಕುಮಾರಯ್ಯ ಮುಂತಾದವರಿದ್ದರು. ಚಿತ್ರ: ಟಿ.ಹೆಚ್.ಸುರೇಶ್

ದೊಡ್ಡ ಸವಾಲು. ಕೇವಲ ಕೆಲವೇ ವರ್ಷಗಳ ಹಿಂದೆ ಯಾವುದೇ ರೀತಿಯಲ್ಲಿಯೂ ಪಾಶ್ಚಿಮಾತ್ಯ ರಾಷ್ಟ್ರಗಳ ಜೊತೆ ಮಾತನಾಡುವ ಅಥವಾ ಸಂಪರ್ಕ ಸಾಧಿಸುವ ಸ್ಥಿತಿಯಲ್ಲಿ ಭಾರತ ದೇಶ ಇರಲಿಲ್ಲ. ಆದರೆ ಇಂದು ಆರ್ಥಿಕಾಭಿವೃದ್ಧಿಯ ದೃಷ್ಟಿಯಲ್ಲಿ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ ಎಂದರೆ ಇದರ ಹಿಂದಿನ ಪರಿಶ್ರಮ ಮತ್ತು ಭಾರತೀಯ ಪ್ರತಿಭೆಗಳ ಬದ್ಧತೆಯೇ ಕಾರಣ ಎನ್ನಬಹುದು. ಇಸ್ರೋ ಮಾಡಿರುವ ಸಾಧನೆಯ ಹಿಂದೆ ಒಳ್ಳೆಯ ದೂರಗಾಮಿತನ ಇದ್ದ ನಾಯಕರು ಕೆಲಸಮಾಡಿದ್ದಾರೆ. ಅವರ ನೇತೃತ್ವದಲ್ಲಿ ಸಾಕಷ್ಟು ಆಧುನಿಕ ರೀತಿಯ ಕ್ಷಿಪಣಿಗಳನ್ನು ತಯಾರಿಸಿದ್ದೇವೆ. ಹಾಗಾಗಿ ಇಂದು ಭಾರತ ಬಲಾಢ್ಯವಾಗಿದೆ. ಅಷ್ಟೇ ಅಲ್ಲದೆ ಇತರ ದೇಶಗಳು ನಮ್ಮ ಉಡಾವಣಾ ಕೇಂದ್ರಗಳನ್ನು ಉಪಯೋಗಿಸಿಕೊಂಡು ಅಂತರಿಕ್ಷ ನೌಕೆಗಳನ್ನು ಹಾರಿಬಿಡುವ ಮಟ್ಟಕ್ಕೆ ಬೆಳೆದಿದ್ದೇವೆ ಎಂದು ಹರ್ಷ ವ್ಯಕ್ತಪಡಿಸಿದರು.

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷ ಮುರುಳಿಧರ ಹಾಲಪ್ಪ ಇದೇ ಸಂದರ್ಭದಲ್ಲಿ ಮಾತನಾಡಿ, ನಿಗಮದ ವತಿಯಿಂದ ರಾಜ್ಯದಾದ್ಯಂತ ಜಿಲ್ಲೆಗಳಲ್ಲಿ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಸಿಮನ್ಸ್ ಸಂಸ್ಥೆಯ ಜೊತೆ 2000 ಕೋಟಿ ರೂಪಾಯಿಗಳ ಒಪ್ಪಂದವಾಗಿದ್ದು, ತರಬೇತಿ ಮತ್ತು ತರಬೇತುದಾರರ ತರಬೇತಿಗಳನ್ನು ಪ್ರಾರಂಭಿಸಲಾಗುವುದು. ಪ್ರತಿವರ್ಷ 30 ಸಾವಿರ ಯುವಜನತೆಗೆ ತರಬೇತಿ ನೀಡುವ ಕಾರ್ಯಕ್ರಮ ಇದಾಗಿದ್ದು ಮುಂಬರುವ ಮೂರು ವರ್ಷಗಳಲ್ಲಿ ಒಟ್ಟು 90 ಸಾವಿರ ಅಭ್ಯರ್ಥಿಗಳನ್ನು ತರಬೇತುಗೊಳಿಸಲಾಗುವುದು. 》 6ನೇ ಪುಟಕ್ಕೆ

# ವಸತಿ ಯೋಜನೆಯಡಿ ದುರ್ಬಲರಿಗೆ ಹೆಚ್ಚು ಮನೆ

**ಬೆಂಗಳೂರು**

ರಾಜ್ಯದಲ್ಲಿ ವಿವಿಧ ವಸತಿ ಯೋಜನೆಗಳಡಿ ಈ ವರ್ಷ ಸಾಮಾನ್ಯ ವರ್ಗದ ಆರ್ಥಿಕ ದುರ್ಬಲರಿಗೆ ಹೆಚ್ಚು ಮನೆಗಳನ್ನು ಒದಗಿಸುವುದಾಗಿ ವಸತಿ ಸಚಿವ ಎಂ.ಕೃಷ್ಣಪ್ಪ ವಿಧಾನಸಭೆಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಅಪ್ಪಚ್ಚು ರಂಜನ್, ಜೆಡಿಎಸ್‌ನ ಶಿವಲಿಂಗೇಗೌಡ ಮತ್ತಿತರರ ಪ್ರಸ್ತಾಪಕ್ಕೆ ಉತ್ತರಿಸಿದ ಅವರು, ಪರಿಶಿಷ್ಟರಿಗೆ ಮೀಸಲಾದ ಮನೆಗಳನ್ನು ಬೇರೆಯವರಿಗೆ ವರ್ಗಾಯಿಸಲು ಸಾಧ್ಯವಿಲ್ಲ. ಕಳೆದ ವರ್ಷ ಬಸವವಸತಿ ಯೋಜನೆ ಅಡಿ ಒಂದು ಲಕ್ಷ ಮನೆಗಳನ್ನು ನಿರ್ಮಿಸಲು ಅವಕಾಶವಿತ್ತು. ಈ ವರ್ಷ ಅದು ಮೂರು ಲಕ್ಷ ಇಪ್ಪತ್ತು ಸಾವಿರಕ್ಕೇರಿದೆ. ಇದೇ ರೀತಿ ವಿವಿಧ ವಸತಿ ಯೋಜನೆಗಳಡಿ ಹೆಚ್ಚು ಮನೆಗಳನ್ನು ನಿರ್ಮಿಸಲು ಅವಕಾಶ ಸಿಕ್ಕಿರುವುದರಿಂದ ಸಾಮಾನ್ಯ ವರ್ಗದ ಆರ್ಥಿಕ ದುರ್ಬಲರಿಗೂ ಹೆಚ್ಚಿನ ಮನೆಗಳು ಲಭ್ಯವಾಗಲಿವೆ ಎಂದರು.

ಪರಿಶಿಷ್ಟರಿಗೆ ಬೇಡಿಕೆ ಆಧಾರದ ಮೇಲೆ ಮನೆಗಳನ್ನು ಒದಗಿಸಲಾಗುತ್ತಿದ್ದು ಅವರಿಗೆಂದು ಮೀಸಲಾದ ಮನೆಗಳನ್ನು ಬೇರೆ ವರ್ಗದವರಿಗೆ ಒದಗಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಗ್ರಾಮಸಭೆಗಳು ವಿವಿಧ ವಸತಿ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಿದ ಮೇಲೆ ಪಟ್ಟಿಯನ್ನು ಪರಿಶೀಲಿಸುವ ಕೆಲಸವನ್ನು ಶಾಸಕರ ಅಧ್ಯಕ್ಷತೆಯ ವಿಜಿಲೆನ್ಸ್ ಕಮಿಟಿ ನೋಡಿಕೊಳ್ಳುತ್ತಿತ್ತು.ಆದರೆ ಅದಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಿದೆ.

ತಪ್ಪು ಮಾಹಿತಿಗಳನ್ನು ನೀಡಿ ಮೂರನೆಯವರು ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದಿದ್ದಾರೆ.ಗುರುವಾರ ಪುನ: ನ್ಯಾಯಾಲಯದಲ್ಲಿ ವಿಚಾರಣೆ ನಡೆಯಲಿದ್ದು ಈ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ ಅಪ್ಪಚ್ಚು ರಂಜನ್, ಕೊಡಗು ಜಿಲ್ಲೆ ಗುಡ್ಡಗಾಡು ಪ್ರದೇಶ. ಸರ್ಕಾರದಿಂದ ವಿವಿಧ ಯೋಜನೆಗಳಡಿ ಮನೆಗಳು ನಿರ್ಮಾಣವಾಗಿ ಬಹುತೇಕ ಖಾಲಿ ಇದ್ದರೂ ಪರಿಶಿಷ್ಟರಿಗೆ ಮೀಸಲಾದ ಮನೆಗಳನ್ನು ಬೇರೆಯವರಿಗೆ ಕೊಡುವುದಿಲ್ಲ ಎನ್ನುತ್ತಿದ್ದಾರೆ ಎಂದು ದೂರಿದರು. ಎಲ್ಲಿ ನಿರ್ದಿಷ್ಟ ಸಮುದಾಯದವರಿಂದ ಮನೆ ಭರ್ತಿಯಾಗುವುದಿಲ್ಲವೋ? ಅಲ್ಲಿ ಬೇರೆ ಸಮುದಾಯಗಳಿಗೆ ಆ ಮನೆಗಳನ್ನು ಒದಗಿಸಬೇಕು ಎಂದು ಅವರು ಮನವಿ ಮಾಡಿ ಕೊಂಡರು.

ಜೆಡಿಎಸ್ ಸದಸ್ಯ ಶಿವಲಿಂಗೇಗೌಡ ಮಾತನಾಡಿ,ಸರ್ಕಾರ ವಿವಿಧ ವಸತಿ ಯೋಜನೆಗಳಡಿ ನಿರ್ಮಾಣ ಮಾಡುತ್ತಿದ್ದ ಮನೆಗಳನ್ನು ಫಲಾನುಭವಿಗಳಿಗೆ ಒದಗಿಸುವ ಸಂಬಂಧ ಗ್ರಾಮಸಭೆಗಳು ಅರ್ಹ ಫಲಾನುಭವಿಗಳ ಪಟ್ಟಿ ಮಾಡುತ್ತವೆ.ತದ ನಂತರ ಪಟ್ಟಿ ಶಾಸಕರ ಅಧ್ಯಕ್ಷತೆಯ ವಿಜಿಲೆನ್ಸ್ ಕಮಿಟಿಗೆ ಬರುತ್ತದೆ. ಆದರೆ ಅದಕ್ಕೂ ನ್ಯಾಯಾಲಯ ತಡೆಯಾಜ್ಞೆ ನೀಡಿದೆ ಎಂದರು.

# ವಿಧಾನಸಭೆಯಲ್ಲಿ ಮಾತಿನ ಚಕಮಕಿ

**ಬೆಂಗಳೂರು**

ಶಾಲಾ ಕಾಲೇಜುಗಳಿಗೆ ಪಠ್ಯ ಪುಸ್ತಕ ಪೂರೈಕೆ ಮಾಡದ ವಿಚಾರದಲ್ಲಿ ಶಾಲಾ ಶಿಕ್ಷಣ ಸಚಿವ ತನ್ವೀರ್ ಸೇಠ್ ಹಾಗೂ ಮಾಜಿ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಮಧ್ಯೆ ವಿಧಾನಸಭೆಯಲ್ಲಿ ಮಾತಿನ ಚಕಮಕಿ ನಡೆಯಿತು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡಿದ ವಿಶ್ವೇಶ್ವರ ಹೆಗಡೆ ಕಾಗೇರಿ, ತಿಂಗಳುಗಳು ಕಳೆಯುತ್ತಿದ್ದರೂ ಪಠ್ಯ ಪುಸ್ತಕ ವಿತರಣೆಯಾಗುತ್ತಿಲ್ಲ, ಇಷ್ಟಕ್ಕೂ ಪಠ್ಯ ಪುಸ್ತಕ ಮುದ್ರಣವೇ ಆಗುತ್ತಿಲ್ಲ ಎಂದು ಆರೋಪಿಸಿದರು.

ಕಾಗೇರಿ ಅವರ ಆರೋಪವನ್ನು ಒಪ್ಪಲು ನಿರಾಕರಿಸಿದ ಸಚಿವ ತನ್ವೀರ ಸೇಠ್, ಪಠ್ಯ ಪುಸ್ತಕ ವಿತರಣೆಗೆ ಕ್ರಮ ಕೈಗೊಂಡಿದ್ದೇವೆ. ಪುಸ್ತಕ ಸರಬರಾಜು ಮಾಡುವ ಪ್ರಕ್ರಿಯೆ ಮುಂದುವರೆದಿದೆ. ಯಾವುದಾದರೂ ಜಿಲ್ಲೆಯಲ್ಲಿ ವ್ಯತ್ಯಯ ಆಗಿದ್ದರೆ ಸೂಕ್ತ ಪರಿಹಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.

# ಕೈ ಕೊಟ್ಟ ಪ್ರಿಯಕರನ ವಿರುದ್ಧ ದೂರು

**ಬೆಂಗಳೂರು**

ಮದುವೆಯಾಗುವುದಾಗಿ ನಂಬಿಸಿ ಪ್ರಿಯಕರ ಕೈಕೊಟ್ಟಿದ್ದಾನೆ ಎಂದು ಆರೋಪಿಸಿ ಇಂಜಿನಿಯರ್‌ರೊಬ್ಬರ ವಿರುದ್ಧ ಯುವ ನಟಿಯೊಬ್ಬರು ಪೊಲೀಸರಿಗೆ ದೂರು ನೀಡಿದ್ದಾರೆ.

ಖಾಸಗಿ ಕಂಪನಿಯಲ್ಲಿ ಪ್ರಾಜೆಕ್ಟ್ ಎಂಜಿನಿಯರ್ ಆಗಿರುವ ಉಲ್ಲಾಸ್ ಪಟೇಲ್ ಎಂಬಾತನ ವಿರುದ್ಧ ನಟಿ ನೀಡಿರುವ ದೂರು ದಾಖಲಿಸಿರುವ ಸದಾಶಿವನಗರ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

# ಡಿ.ಹೆಚ್.ಶಂಕರಮೂರ್ತಿ ಪದಚ್ಯುತಿಗೆ ಸಿದ್ದತೆ

**ಬೆಂಗಳೂರು**

ಬಿಜೆಪಿಯ ಡಿ.ಎಚ್. ಶಂಕರಮೂರ್ತಿ ಅವರನ್ನು ವಿಧಾನಪರಿಷತ್ ಸಭಾಪತಿ ಸ್ಥಾನದಿಂದ ಪದಚ್ಯುತಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಗತ್ಯ ಸಿದ್ಧತೆ ಕೈಗೊಂಡಿದ್ದಾರೆ.

ಜೆಡಿಎಸ್ ಪಕ್ಷ ಬಿಜೆಪಿಗೆ ಬೆಂಬಲ ನೀಡುತ್ತಿರುವ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಇದೀಗ ಪಕ್ಷೇತರ ಬೆಂಬಲ ಯಾಚಿಸಿದ್ದಾರೆ. ಅಲ್ಲದೇ ಜೆಡಿಎಸ್‌ನ ಪುಟ್ಟಣ್ಣ ಅವರ ಜತೆ ಚರ್ಚೆ ನಡೆಸಿರುವ ಸಿದ್ದರಾಮಯ್ಯ, ಜೆಡಿಎಸ್‌ನಲ್ಲಿ ಒಡಕುಂಟು ಮಾಡಲು ಕಾರ್ಯತಂತ್ರ ರೂಪಿಸಿದ್ದಾರೆ. ಇದರ ಜತೆಗೆ ಪಕ್ಷೇತರ ಬೆಂಬಲ ಪಡೆದು ಶಂಕರಮೂರ್ತಿ ಅವರನ್ನು ಪದಚ್ಯುತಗೊಳಿಸಲು ಎಲ್ಲಾ ರೀತಿಯ ಕಾರ್ಯ ತಂತ್ರ ನಡೆಯುತ್ತಿದ್ದು, ಜೆಡಿಎಸ್ ನಡೆ ಇನ್ನೂ ನಿಗೂಢವಾಗಿದೆ. ಈ ಮಧ್ಯೆ ಜೆಡಿಎಸ್ ಸಭಾಪತಿ ಸ್ಥಾನವನ್ನು ಹಿರಿಯ ಸದಸ್ಯ ಬಸವರಾಜ ಹೊರಟ್ಟಿ ಅವರಿಗೆ ನೀಡಬೇಕೆಂದು ಷರತ್ತು ವಿಧಿಸಿದ್ದು, ಕೊನೆ ಕ್ಷಣದಲ್ಲಿ ಯಾವ ರೀತಿಯ ಬದಲಾವಣೆ ಆಗುತ್ತದೆಯೋ ಎನ್ನುವ ಕುತೂಹಲ ತೀವ್ರಗೊಂಡಿದೆ.

ಅವಿಶ್ವಾಸ ನಿರ್ಣಯದ ಬಗ್ಗೆ ಇಂದು ಚರ್ಚೆ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ಸದಸ್ಯರಿಗೆ ವಿಪ್ ಜಾರಿ ಮಾಡಿದ್ದಾರೆ.

ಆದರೆ ಕೊನೆ ಕ್ಷಣದಲ್ಲಿ ಯಾವುದೇ ರೀತಿಯ ಬದಲಾವಣೆಗಳಾಗುವ ಸಾಧ್ಯತೆಯಿದ್ದು, ಎರಡೂ ರಾಜಕೀಯ ಪಕ್ಷಗಳಿಗೆ ಚೆಳ್ಳೆ ಹಣ್ಣು ತಿನ್ನಿಸಲು ಜೆಡಿಎಸ್ ಸಹ ಕಾರ್ಯ ತಂತ್ರ ರೂಪಿಸಿದೆ.

ಪ್ರಸ್ತುತ ಎಲ್ಲರ ಕಣ್ಣು ಐವರು ಪಕ್ಷೇತರರ ಮೇಲಿದ್ದು, ಎಂ.ಡಿ. ಲಕ್ಷ್ಮೀನಾರಾಯಣ, ರಘು ಆಚಾರ್ ಮತ್ತು ವಿವೇಕ್ ರಾವ್ ಪಾಟೀಲ್ ಅವರು ಕಾಂಗ್ರೆಸ್ ಬೆಂಬಲಿಗರಾಗಿದ್ದಾರೆ. ಮಲ್ಲಿಕಾರ್ಜುನ್ ಮತ್ತು ಬಸವರಾಜ ಪಾಟೀಲ್ ಅವರು ಬಿಜೆಪಿ ಪರವಾಗಿದ್ದಾರೆ. ಹಾಗೆಂದು ಬಿಜೆಪಿಗೆ ಪೂರ್ಣ ಪ್ರಮಾಣದಲ್ಲಿ ಬೆಂಬಲ ನೀಡುವ ಸಾಧ್ಯತೆಗಳೂ ಇಲ್ಲ, ಹೀಗಾಗಿ ಅವಿಶ್ವಾಸ ನಿರ್ಣಯ ತೀವ್ರ ಕುತೂಹಲ ಕೆರಳಿಸಿದೆ.

# ಆಟೋ ಚಾಲಕರಿಂದ ಸಾರ್ವಜನಿಕರ ಸುಲಿಗೆ

## ವಿಧಾನಸಭೆಯಲ್ಲಿ ತೀವ್ರ ಚರ್ಚೆ–ಸೂಕ್ತ ಕ್ರಮಕ್ಕೆ ಶಾಸಕರ ಆಗ್ರಹ

**ಬೆಂಗಳೂರು**

ರಾಜ್ಯದೆಲ್ಲೆಡೆ ಆಟೋ ಚಾಲಕರು ಸಾರ್ವ ಜನಿಕರನ್ನು ಮನಬಂದಂತೆ ಸುಲಿಯುತ್ತಿದ್ದಾರೆ ಎಂದು ವಿಧಾನಸಭೆಯಲ್ಲಿ ಶಾಸಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಸದಸ್ಯ ಜಿ.ಹೆಚ್.ಶ್ರೀನಿವಾಸ್, ವಿವಿಧ ಜಿಲ್ಲೆ, ತಾಲ್ಲೂಕು, ಹೋಬಳಿ ಕೇಂದ್ರಗಳಲ್ಲಿ ಆಟೋ ಚಾಲಕರು ಪ್ರಯಾಣಿಕರಿಂದ ಮನಸೋ ಇಚ್ಛೆ ಸುಲಿಗೆ ಮಾಡುತ್ತಿದ್ದಾರೆ. ಸರ್ಕಾರ ಇದರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರಾಜ್ಯದ ಬಹುತೇಕ ಕಡೆ ಆಟೋಗಳಿಗೆ ಮೀಟರ್ರೇ ಇರುವುದಿಲ್ಲ.ಬದಲಿಗೆ ಆಟೋ ಚಾಲಕರು ಹೇಳಿದಷ್ಟು ಹಣವನ್ನು ಕೊಟ್ಟು ಪ್ರಯಾಣಿಸುವ ಸ್ಥಿತಿ ಜನರಿಗೆ ಬಂದಿದೆ. ಇದು ಸರಿಯಲ್ಲ, ತಕ್ಷಣವೇ ಸರ್ಕಾರ ಈ ಕುರಿತು ನಿಖರ ಕ್ರಮ ಕೈಗೊಳ್ಳಬೇಕು.ಆಟೋ ಚಾಲಕರು ಮೊದಲು ಮೀಟರ್ ಅಳವಡಿಸಿಕೊಳ್ಳಬೇಕು. ಇಂತಹ ಸ್ಥಳಗಳಿಗೆ ಹೋಗಲು ಇಂತಿಷ್ಟು ಶುಲ್ಕವಾಗುತ್ತದೆ ಎಂದು ದರಪಟ್ಟಿ ನಮೂದಿಸುವಂತಾಗಬೇಕು. ಇದಾಗದಿದ್ದರೆ ಆಟೋ ಚಾಲಕರಿಂದ ಪ್ರಯಾಣಿಕರ ಮೇಲೆ ನಡೆಯುತ್ತಿರುವ ಶೋಷಣೆ ಮುಂದುವರಿಯುತ್ತದೆ. ಹಲವಾರು ಬಾರಿ ಇದನ್ನು ಸರ್ಕಾರದ ಗಮನಕ್ಕೆ ತಂದರೂ ಈ ಕುರಿತು ನಿಖರವಾದ ಕ್ರಮ ಕೈಗೊಂಡಿಲ್ಲ. ಹೀಗಾಗಿ ಇನ್ನು ಆಟೋಚಾಲಕರು ಜನರನ್ನು ಸುಲಿಯುವ ಕೆಲಸವನ್ನು ಕಟ್ಟು ನಿಟ್ಟಾಗಿ ತಡೆಗಟ್ಟಬೇಕು ಎಂದು ಅವರು ಆಗ್ರಹಿಸಿದರು. ಈ ಸಂದರ್ಭದಲ್ಲಿ ಉತ್ತರಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ನಗರ ಪ್ರದೇಶಗಳಲ್ಲಿ ಈ ಸಮಸ್ಯೆ ಕಡಿಮೆ.ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇದೆ ಎಂದು ಒಪ್ಪಿಕೊಂಡರು.ಹೀಗಾಗಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಈ ಕುರಿತು ಹೆಚ್ಚಿನ ಅಧಿಕಾರ ನೀಡಿದ್ದು ಮೀಟರ್ ಅಳವಡಿಕೆ ಮಾಡುವುದು,ದರ ಪಟ್ಟಿ ನಮೂದಿಸುವುದು ಸೇರಿದಂತೆ ಎಲ್ಲ ಬಗೆಯ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದೇವೆ. ಅವರು ಸ್ಥಳೀಯ ಪರಿಸ್ಥಿತಿಗನುಗುಣವಾಗಿ ತೀರ್ಮಾನ ಕೈಗೊಳ್ಳುತ್ತಾರೆ ಎಂದರು.

> **ಆಟೋ ಚಾಲಕರು ಮೊದಲು ಮೀಟರ್ ಅಳವಡಿಸಿಕೊಳ್ಳಬೇಕು. ಇಂತಹ ಸ್ಥಳಗಳಿಗೆ ಹೋಗಲು ಇಂತಿಷ್ಟು ಶುಲ್ಕವಾಗುತ್ತದೆ ಎಂದು ದರಪಟ್ಟಿ ನಮೂದಿಸುವಂತಾಗಬೇಕು. ಇದಾಗದಿದ್ದರೆ ಆಟೋ ಚಾಲಕರಿಂದ ಪ್ರಯಾಣಿಕರ ಮೇಲೆ ನಡೆಯುತ್ತಿರುವ ಶೋಷಣೆ ಮುಂದುವರಿಯುತ್ತದೆ.**

# ಡಿ.ಹೊಸಹಳ್ಳಿ ಗ್ರಾ.ಪಂ.ನಲ್ಲಿ ಅವ್ಯವಹಾರ

## ತಾಲ್ಲೂಕು ಪಂಚಾಯಿತಿ ಮುಂದೆ ಗ್ರಾ.ಪಂ. ಸದಸ್ಯರಿಂದ ಪ್ರತಿಭಟನೆ

**ಕುಣಿಗಲ್**

ತಾಲ್ಲೂಕಿನ ಹುಲಿಯೂರುದುರ್ಗ ಹೋಬಳಿಯ ಡಿ.ಹೊಸಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ 14ನೇ ಹಣಕಾಸು ಯೋಜನೆಯಲ್ಲಿನ ಅವ್ಯವಹಾರ ಸೇರಿದಂತೆ ಹಲವು ಕಾಮಗಾರಿ ಮಾಡದೇ ಇದ್ದರೂ ಪಿ.ಡಿ.ಒ. ಮತ್ತು ಗ್ರಾ.ಪಂ. ಅಧ್ಯಕ್ಷರು ಶಾಮೀಲಾಗಿ ಬಿಲ್ ಮಾಡಿಸಿಕೊಂಡಿದ್ದಾರೆಂದು ಆರೋಪಿಸಿ ಗ್ರಾ.ಪಂ.ಸದಸ್ಯರು ಸೇರಿದಂತೆ ಗ್ರಾಮಸ್ಥರು ತಾಲ್ಲೂಕು ಪಂಚಾಯಿತಿಯ ಮುಂದೆ ಪ್ರತಿಭಟಿಸಿದ ಘಟನೆ ನಡೆಯಿತು.

ಬುಧವಾರ ತಾ.ಪಂ. ಕಚೇರಿಗೆ, ಡಿ.ಹೊಸಹಳ್ಳಿ ಗ್ರಾಮ ಪಂಚಾಯಿತಿಯ ಕೆಲವು ಸದಸ್ಯರು ಸೇರಿದಂತೆ ಗ್ರಾಮಸ್ಥರು ಮುತ್ತಿಗೆ ಹಾಕಿ ಪಂಚಾಯಿತಿಯಲ್ಲಿ ಹಲವು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು ಅವುಬಹುತೇಕ ಕಳಪೆಯಿಂದ ಕೂಡಿವೆ ಹಾಗೂ ಇನ್ನೂ ಹಲವು ಯೋಜನೆಯ ಅನುದಾನಗಳು ಪಂಚಾಯಿತಿಗೆ ಹರಿದುಬಂದಿದ್ದು, ಇದರಲ್ಲಿ 14ನೇ ಹಣಕಾಸು ಯೋಜನೆಯಡಿ ಸುಮಾರು ಹಣ ಸಾಮಗ್ರಿ ಖರೀದಿ ಮಾಡಲಾಗಿದೆ ಎಂದು ಸುಳ್ಳು ಬಿಲ್ ಸೃಷ್ಟಿಸಿ ಹಣ ಲಪಟಾಯಿಸಿದ್ದಾರೆ ಹಾಗೂ ಅಂಗನವಾಡಿ ಕಟ್ಟಡದ ಸುತ್ತ ಕಾಂಪೌಂಡ್ ನಿರ್ಮಾಣಕ್ಕಾಗಿ 56 ಸಾವಿರ ಕ್ರಿಯಾ ಯೋಜನೆ ಮಂಜೂರಾಗಿದ್ದು ಅದರಂತೆ ಕಾಮಗಾರಿಯನ್ನೇ ಮಾಡದೆ, ಎಂ.ಬಿ.ಪುಸ್ತಕದಲ್ಲಿ ದಾಖಲು ಮಾಡದೆ ಬಿಲ್ ಮಾಡಿರುವ ಪಿ.ಡಿ.ಒ. ಸುರೇಶ್ ಮತ್ತು ಅಧ್ಯಕ್ಷೆ ಗೀತಾಕೃಷ್ಣ ಅವರು ಗುತ್ತಿಗೆದಾರರೊಂದಿಗೆ ಶಾಮೀಲಾಗಿದ್ದಾರೆ. ಅಲ್ಲದೆ ಇನ್ನೂ ವಿವಿಧ ಕಾಮಗಾರಿಗಳು ಲೋಪದಿಂದ ಕೂಡಿದ್ದು ಈ ಬಗ್ಗೆ ಹಲವು ಬಾರಿ ಇ.ಒ. ಅವರಿಗೆ ದೂರಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿ ಧಿಕ್ಕಾರ ಕೂಗಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರಿಗೆ ಬೆಂಬಲ ವ್ಯಕ್ತಪಡಿಸಿದ ಬಿ.ಜೆ.ಪಿ. ಮುಖಂಡ ಡಿ.ಕೃಷ್ಣಕುಮಾರ್, ಇ.ಒ. ವಿಜಿಗೌಡ ಅವರ ವರ್ತನೆಯನ್ನು ಖಂಡಿಸಿ ತರಾಟೆ ತೆಗೆದುಕೊಂಡು ಸಾರ್ವಜನಿಕರ ಸಮಸ್ಯೆಯನ್ನು ಕೇಳದ ಅಧಿಕಾರಿಗಳು ಇದ್ದರೆಷ್ಟು ಬಿಟ್ಟರೆಷ್ಟು, ಹಲವು ಬಾರಿ ಗ್ರಾಮಗಳ ಸಮಸ್ಯೆ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಪಂಚಾಯಿತಿಗಳ ಅವ್ಯವಹಾರಗಳ ಬಗ್ಗೆ ದೂರಿದರೂ ನೀವು ಜಾಗೃತರಾಗಿ ಸಮಸ್ಯೆಯನ್ನು ಬಗೆ ಹರಿಸದೆ ಬರೀ ಸಬೂಬು ಹೇಳುತ್ತ ಕಾಲಹರಣ ಮಾಡುತ್ತಿದ್ದೀರ, ಜೊತೆಗೆ ಸರ್ಕಾರದ ಸವಲತ್ತುಗಳನ್ನ 》 6ನೇ ಪುಟಕ್ಕೆ

> **14ನೇ ಹಣಕಾಸು ಯೋಜನೆಯಡಿ ಸುಮಾರು ಹಣ ಸಾಮಗ್ರಿ ಖರೀದಿ ಮಾಡಲಾಗಿದೆ ಎಂದು ಸುಳ್ಳು ಬಿಲ್ ಸೃಷ್ಟಿಸಿ ಹಣ ಲಪಟಾಯಿಸಿದ್ದಾರೆ ಹಾಗೂ ಅಂಗನವಾಡಿ ಕಟ್ಟಡದ ಸುತ್ತ ಕಾಂಪೌಂಡ್ ನಿರ್ಮಾಣಕ್ಕಾಗಿ 56 ಸಾವಿರ ಕ್ರಿಯಾ ಯೋಜನೆ ಮಂಜೂರಾಗಿದ್ದು ಅದರಂತೆ ಕಾಮಗಾರಿಯನ್ನೇ ಮಾಡದೆ, ಎಂ.ಬಿ.ಪುಸ್ತಕದಲ್ಲಿ ದಾಖಲು ಮಾಡದೆ ಬಿಲ್ ಮಾಡಿರುವ ಪಿ.ಡಿ.ಒ. ಸುರೇಶ್ ಮತ್ತು ಅಧ್ಯಕ್ಷೆ ಗೀತಾಕೃಷ್ಣ ಅವರು ಗುತ್ತಿಗೆದಾರರೊಂದಿಗೆ ಶಾಮೀಲಾಗಿದ್ದಾರೆ.**



# ಪಾಲಿಕೆ ಆವರಣ:12 ಮರಗಳ ತೆರವಿಗೆ ಅರಣ್ಯ ಇಲಾಖೆಯಿಂದ ಇಂದು ಹರಾಜು

**ತುಮಕೂರು**

ತುಮಕೂರು ನಗರದ ತುಮಕೂರು ಮಹಾನಗರ ಪಾಲಿಕೆ ಆವರಣದಲ್ಲಿರುವ 12 ಮರಗಳನ್ನು ತೆರವುಗೊಳಿಸಲು ಮಹಾನಗರ ಪಾಲಿಕೆಯ ಕೋರಿಕೆಯಂತೆ ಪ್ರಕ್ರಿಯೆ ನಡೆಸಿರುವ ಅರಣ್ಯ ಇಲಾಖೆಯು ಜೂನ್ 15 ರಂದು ಬೆಳಗ್ಗೆ 11 ಗಂಟೆಗೆ ಪಾಲಿಕೆ ಆವರಣದಲ್ಲೇ ಸದರಿ ಮರಗಳ ಬಹಿರಂಗ ಹರಾಜು ನಡೆಸಲಿದೆ.

ಪಾಲಿಕೆ ಆವರಣದಲ್ಲಿ ಬೃಹತ್ ವೃಕ್ಷಗಳಾಗಿ ದಶಕಗಳಿಂದ ನೆರಳು ನೀಡುತ್ತಿರುವ 6 ಮಳೆ ಮರಗಳು, ಮೂರು ಗುಲ್ಮೋಹರ್ ಮರಗಳು, ಒಂದು ಮಹಾಗನಿ, ಒಂದು ಬಸರಿ ಹಾಗೂ ಒಂದು ಫೆಲ್ಟೋಫಾರಂ ಮರಗಳನ್ನು ಈ ಹರಾಜಿನ ಮೂಲಕ ತೆರವುಗೊಳಿಸಲಾಗುವುದು. ಹರಾಜುದಾರರು ಹರಾಜಾದ ಮುಂದಿನ 15 ದಿನಗಳೊಳಗಾಗಿ ಸದರಿ ಮರಗಳನ್ನು ತೆರವು ಮಾಡಬೇಕಾಗುತ್ತದೆ.

ಮಹಾನಗರ ಪಾಲಿಕೆ ಆವರಣದಲ್ಲಿರುವ ಅರಳಿಕಟ್ಟೆಯ ಪಕ್ಕದಲ್ಲಿದ್ದ ಪಾಲಿಕೆಯ ಹಳೆಯ ಕಟ್ಟಡ ಮತ್ತು ಪಕ್ಕದ ಶೀಟ್ ಕಟ್ಟಡವನ್ನು ಈಗಾಗಲೇ ತೆರವುಗೊಳಿಸಲಾಗಿದೆ. ಈ ಸ್ಥಳದಲ್ಲಿ ಪಾಲಿಕೆಯ ಹೊಸ ಕಟ್ಟಡ ನಿರ್ಮಿಸಲು ಯೋಜಿಸಲಾಗಿದೆ. ಅದಕ್ಕಾಗಿ 12 ಮರಗಳನ್ನು ತೆರವುಗೊಳಿಸಬೇಕೆಂದು ಗುರುತಿಸಿ, ಪಾಲಿಕೆಯು ಅರಣ್ಯ ಇಲಾಖೆಯನ್ನು ಕೋರಿಕೊಂಡ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯು ವಿವಿಧ ಪ್ರಕ್ರಿಯೆಗಳನ್ನು ಪೂರೈಸಿ ಅಂತಿಮವಾಗಿ ಸದರಿ ಮರಗಳನ್ನು ಹರಾಜು ಹಾಕಿ, ತೆರವುಗೊಳಿಸಲು ಮುಂದಾಗಿದೆ.

**ಅರಳಿಮರ ಸ್ಥಳಾಂತರ, ಹೊಸದಾಗಿ 100 ಗಿಡ:** ಹಳೆ ಕಟ್ಟಡದ ಒಳಾವರಣದಲ್ಲಿ ಒಂದು ಬೃಹತ್ ಬಸರಿ ಮರ ಇದೆ. ಮಿಕ್ಕ ವೃಕ್ಷಗಳು ಪಾರ್ಶ್ವದಲ್ಲಿ ಉದ್ದಕ್ಕೂ ಇವೆ. ಇವಿಷ್ಟೇ ಅಲ್ಲದೆ, ಹಳೆಯ ಕಟ್ಟಡದ ಕಾಂಪೌಂಡ್ ಗೋಡೆಯಲ್ಲಿ ಅರಳಿಮರವೊಂದು ಬೆಳೆದಿದ್ದು, ಇದನ್ನು ಪಾಲಿಕೆ ಆವರಣದ ಖಾಲಿ ಜಾಗಕ್ಕೆ ಸ್ಥಳಾಂತರಿಸಿ ಅಲ್ಲೇ ಬೆಳೆಸಲು ಪಾಲಿಕೆ ಯೋಚಿಸಿದೆ. ಅಲ್ಲದೆ ತೆರವಾಗುವ ಮರಗಳ ಬದಲಿಗೆ ಹೊಸದಾಗಿ ನೂರು ಗಿಡಗಳನ್ನು ನೆಡಲು ಪಾಲಿಕೆ ಉದ್ದೇಶಿಸಿದೆ.

**ಸಾರ್ವಜನಿಕರ ವಿರೋಧ:** ಈ ಮಧ್ಯೆ ಸದರಿ ವೃಕ್ಷಗಳನ್ನು ತೆರವುಗೊಳಿಸುವ ಉದ್ದೇಶಕ್ಕೆ ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗುತ್ತಿದೆ. ಈ ಬೃಹತ್ ವೃಕ್ಷಗಳನ್ನು ಕಡಿಯುವ ಬದಲಾಗಿ, ಇವುಗಳನ್ನು ಉಳಿಸಿಕೊಂಡೇ ಹೊಸ ಕಟ್ಟಡ ಕಟ್ಟಬೇಕೆಂದು ಇವರುಗಳ ವಾದವಾಗಿದೆ. ಇಲ್ಲಿರುವ ಎಲ್ಲ ವೃಕ್ಷಗಳೂ ಬಹುತೇಕ ತುಂಬ ಹಳೆಯದ್ದಾಗಿವೆ. ಬೃಹತ್ ವೃಕ್ಷಗಳು ತಂಪು ಹಾಗು ನೆರಳು ನೀಡುತ್ತಿದ್ದು, ಪಾಲಿಕೆಯ ಆವರಣದಲ್ಲಿ ಹಸಿರಿನ ವಾತಾವರಣ ಸೃಷ್ಟಿಸಿದೆ. ಆದಕಾರಣ ಇವುಗಳನ್ನು ಉಳಿಸಬೇಕೆಂದು ವೃಕ್ಷಪ್ರೇಮಿಗಳು ವಾದಿಸುತ್ತಿದ್ದಾರೆ. ಜೂನ್ 15 ರಂದು ಬೆಳಗ್ಗೆ 11 ಗಂಟೆಗೆ ಹರಾಜು ನಡೆಯುವ ಸಂದರ್ಭದಲ್ಲೇ ವಿರೋಧ ವ್ಯಕ್ತಪಡಿಸಲು ಉದ್ದೇಶಿಸಿದ್ದಾರೆ.

> **ವೃಕ್ಷಗಳನ್ನು ತೆರವುಗೊಳಿಸುವ ಉದ್ದೇಶಕ್ಕೆ ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗುತ್ತಿದೆ. ಈ ಬೃಹತ್ ವೃಕ್ಷಗಳನ್ನು ಕಡಿಯುವ ಬದಲಾಗಿ, ಇವುಗಳನ್ನು ಉಳಿಸಿಕೊಂಡೇ ಹೊಸ ಕಟ್ಟಡ ಕಟ್ಟಬೇಕೆಂದು ಇವರುಗಳ ವಾದವಾಗಿದೆ. ಇಲ್ಲಿರುವ ಎಲ್ಲ ವೃಕ್ಷಗಳೂ ಬಹುತೇಕ ತುಂಬ ಹಳೆಯದ್ದಾಗಿವೆ. ಬೃಹತ್ ವೃಕ್ಷಗಳು ತಂಪು ಹಾಗು ನೆರಳು ನೀಡುತ್ತಿದ್ದು, ಪಾಲಿಕೆಯ ಆವರಣದಲ್ಲಿ ಹಸಿರಿನ ವಾತಾವರಣ ಸೃಷ್ಟಿಸಿದೆ.**

